

## ಅರಬ್ಬೀ ಮತ್ತು ಕನ್ನಡ ಶಾಸನ

ಚಿತ್ರದಲ್ಲಿ ಕಾಣಿಸುವ ಏಕ ಶಿಲೆಯಲ್ಲಿ ಕೆತ್ತಲಾಗಿರುವ ಅರಬ್ಬೀ ಮತ್ತು ಕನ್ನಡ ಭಾಷೆಯ ಶಾಸನವನ್ನು ಈಗಿನ ವಿಜಯಪುರದ (ಹಿಂದಿನ ಬಿಜಾಪುರ) ಜಗತ್ಪ್ರಸಿದ್ಧ ಗೋಳಗುಮ್ಮಟದ ಎದುರು ಇರುವ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ. ಕ್ರಿಸ್ತ ಶಕ 1500 ರ ಶತಮಾನದ ಶಾಸನವಿದಾಗಿದ್ದು ಅಂದಿನ ಕನ್ನಡವನ್ನು ಓದಲು ಸಾಧ್ಯವಿದ್ದರೂ ಆಡು ಭಾಷೆ ಅರ್ಥೈಸುವುದು ಕಷ್ಟಸಾಧ್ಯ! ಆದರೆ ಬರಹದ ಕೆಳಗೆ ಸಾಂಕೇತಿಕವಾಗಿ ಚಿತ್ರಿಸಿರುವ ಹೆಣ್ಣಿನ ಮೇಲೆ ಆಕ್ರಮಣಗೈಯುತ್ತಿರುವ ಪ್ರಾಣಿಯ ಕೆತ್ತನೆ ಚಿತ್ರ ಅಂದಿಗೂ ಹೆಣ್ಣಿನ ಮೇಲೆ ದೌರ್ಜನ್ಯ ನಡೆಯುತ್ತಿತ್ತೆಂಬ ಗುಮಾನಿಯನ್ನು ಬಿಂಬಿಸುವಂತಿದೆ! 16ನೇ ಶತಮಾನದ ಪರ್ಷಿಯನ್ ಶಾಸನವನ್ನೂ, ಪವಿತ್ರ ಖುರಾನ್ ಗ್ರಂಥದ ಸೂಕ್ತಿಗಳ ಕೆತ್ತನೆಯನ್ನೂ, 12–13ನೇ ಶತಮಾನದ ಇನ್ನಿತರ ಕನ್ನಡ ಶಾಸನಗಳನ್ನೂ ಸದ್ರಿ ಮ್ಯೂಸಿಯಂ ಒಳಗೊಂಡಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಕಲಾತ್ಮಕ ಕಣಿಲೆ

ಮಳೆಗಾಲ ಬಂದರೆ ಬಿದಿರು ತನ್ನ ವಂಶವೃದ್ಧಿ ಮಾಡಲು ಆರಂಭಿಸುತ್ತದೆ. ಮಳೆಗಾಲದಲ್ಲಿ ಸಿಡಿಲ ಜೊತೆ ಬರುವ ಮೊದಲ ಮಳೆ ಬಿದ್ದ ಎರಡು ಮೂರು ದಿನಗಳಲ್ಲಿ ಹೊಸ ಬಿದಿರು ಬೆಳೆಯಲು ಆರಂಭಿಸುತ್ತದೆ. ಇದನ್ನು ಕಣಿಲೆ ಎಂದು ದಕ್ಷಿಣ ಕನ್ನಡದ ಭಾಗದಲ್ಲಿ ಕರೆಯಲಾಗುವುದು.

ನೋಡಲು ಕಲಾತ್ಮಕವಾಗಿರುವ, ಆನೆಯ ದಂತದಂತೆ ಕಾಣುವ ಈ ಹಸಿರು ಬಿದಿರಿನ ಎಳೆಯನ್ನು ಅದು ಹುಟ್ಟಿದ ಎರಡು ಮೂರು ದಿನದಲ್ಲಿ ಅಂದರೆ ನಾಲ್ಕು ಐದು ಅಡಿ ಎತ್ತರ ಬೆಳೆಯುವ ಮೊದಲು ಕತ್ತರಿಸಿದರೆ ಪದಾರ್ಥ, ಪಲ್ಯ ಮಾಡಲು ಬಳಕೆ ಮಾಡಬಹುದಾಗಿದೆ. ಬಿದಿರಿನ ಗಿಡ ಹುಟ್ಟಿದ ಮೂರು ನಾಲ್ಕು ದಿನದಲ್ಲಿ ಅದನ್ನು ಕತ್ತರಿಸದೆ ಹೋದರೆ ಅದು ಹತ್ತು ಹದಿನೈದು ಅಡಿ ಬೆಳೆದು ಪದಾರ್ಥಕ್ಕೆ ಬಳಕೆ ಮಾಡಲು ಆಗುವುದಿಲ್ಲ.

ಹಸಿರು ಬಿದಿರಿನ ಕಣಿಲೆಯನ್ನು ಮಾತ್ರ ಪದಾರ್ಥ, ಪಲ್ಯ ಮಾಡಲು ಬಳಕೆ ಮಾಡಲಾಗುತ್ತದೆ. ಕತ್ತರಿಸಿದ ಕಣಿಲೆಯನ್ನು ನೀರಲ್ಲಿ ಹಾಕಿ ಎರಡು ದಿನ ಇಡಬೇಕು. ಈ ಅವಧಿಯಲ್ಲಿ ನೀರು ಬದಲಿಸಿದ ಬಳಿಕ ಕಣಿಲೆಯನ್ನು ಪದಾರ್ಥ, ಪಲ್ಯವಾಗಿ ಬಳಕೆ ಮಾಡಬಹುದಾಗಿದೆ.

—ಅರುಣ್ ಕಿಲ್ಲೂರು

